

ಕಳಸದ ಗುರು ಗೋವಿಂದ ಭಟ್ಟರು — ಸಂತ ಶಿಶುನಾಳ ಶರೀಫರು

# ‘ತರವಲ್ಲ ತಗಿ ನಿನ್ನ ತಂಬೂರಿ ಸ್ವರ..’

**ಸಂತ ಶಿಶುನಾಳ ಶರೀಫರ ಜನ್ಮದ್ವಿಶತಮಾನೋತ್ಸವ ಜುಲೈ 3, 2018ರಂದು. ಈ ‘ತತ್ವಪದ ಹರಿಕಾರ’ರು ರಚಿಸಿದ ಪ್ರತಿಯೊಂದು ಹಾಡುಗಳು ಸದಾ ಮಾರ್ದನಿಸುವಂಥವು. ಶರೀಫರ ಹಾಡುಗಳಿಗೆ ಸ್ವರಮಾಲೆ ಪೋಣಿಸಿ ಹಾಡಿದರೆ ಸಂಗೀತದ ಗಂಧಗಾಳಿ ಇಲ್ಲದ ವ್ಯಕ್ತಿಯೂ ತಲೆದೂಗುತ್ತಾನೆ, ಅವರ ಅರ್ಥಪೂರ್ಣ ಸಾಹಿತ್ಯಕ್ಕೆ ತಲೆಬಾಗುತ್ತಾನೆ. ಇಂಥ ವಿಶಿಷ್ಟ ಹೂರಣವುಳ್ಳ ಸಂಗೀತ ನೀಡಿದ ಸಂತ ಶಿಶುನಾಳ ಶರೀಫರು ಸಂಗೀತದ ಅತ್ಯಮೂಲ್ಯ ಆಸ್ತಿ.**

**■ ಉಮಾ ಅನಂತ್**

ತರವಲ್ಲ ತಗಿ ನಿನ್ನ ತಂಬೂರಿ ಸ್ವರ... ತಂಬೂರಿಯ ಷಡ್ಜ, ಪಂಚಮ ತಂತಿಗಳನ್ನು ಮೀಟುತ್ತಾ ಈ ತತ್ವಪದವನ್ನು ಯಾವುದೇ ಕಲಾವಿದ ಹಾಡಿದರೂ ಕೇಳಿದಷ್ಟು ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಈ ಹಾಡಿನ ಮಾಧುರ್ಯ, ರಾಗ, ಅರ್ಥಪೂರ್ಣ ಸಾಹಿತ್ಯ ಇದಕ್ಕೆ ಕಾರಣ. ಅದೇ ರೀತಿ ‘ಗುಡಿಯ ನೋಡಿರಣ್ಣ ದೇಹದ ಗುಡಿಯ ನೋಡಿರಣ್ಣ’, ನೀನೆ ಅನಾದಿ ನಾನೇನು ಬೇಡಲಿ ಶಂಭುಲಿಂಗಾ..’ ಬಿದ್ದಿಯಬ್ಬೇ ಮುದುಕಿ..; ‘ಕೋಡಗನ ಕೋಳಿ ನುಂಗಿತ್ತಾ..’ ಮುಂತಾದ ಹಾಡುಗಳು ಯಾವತ್ತೂ ಕೇಳುಗರ ಬೇಡಿಕೆ, ಜನಪ್ರಿಯತೆಯನ್ನು ಕಳೆದುಕೊಳ್ಳುವುದೇ ಇಲ್ಲ.

ಸಂತ ಶಿಶುನಾಳ ಶರೀಫರ ಈ ಎಲ್ಲ ತತ್ವಪದಗಳನ್ನು ಸುಗಮ ಸಂಗೀತ, ಶಾಸ್ತ್ರೀಯ ಸಂಗೀತಗಾರರು ಮನತಣಿಯೆ ಹಾಡುತ್ತಾರೆ, ಅನುಭವಿಸುತ್ತಾರೆ, ಜೀವ ಭಾವ ತುಂಬಿ ಅನುರಣಿಸುತ್ತಾರೆ. ಶಿಶುನಾಳ ಶರೀಫರ ಸಾಹಿತ್ಯ ಸಂಗೀತ ಕೃತಿಗಳು ಹೀಗೆ ‘ಎವರ್‌ಗ್ರೀನ್’ ಆಗಿ ವಿಜೃಂಭಿಸಲು ಈ ಹಾಡುಗಳಲ್ಲಿರುವ ಅರ್ಥಪೂರ್ಣ ಸಾಹಿತ್ಯ, ಸಾಮಾಜಿಕ ಕಳಕಳಿ ಜತೆಗೆ ಅದ್ಭುತ ಜೀವನ ಸಂದೇಶವನ್ನು ಸಾರುವ ವಿಚಾರಗಳೇ ಕಾರಣ.

ಹಾಗೆ ನೋಡಿದರೆ ‘ಈಶ್ವರ ಅಲ್ಲಾ, ನೀನೇ ಎಲ್ಲಾ’ ಎಂದು ಸಮಾಜಕ್ಕೆ ಬೋಧಿಸಿದವರು, ಆಚರಣೆಯಲ್ಲಿ ತಂದು ಸಾಧಿಸಿದವರು ಧಾರವಾಡ ಜಿಲ್ಲೆ ಕುಂದಗೋಳ ಸಮೀಪದ ಕಳಸದ ಗುರು ಗೋವಿಂದ ಭಟ್ಟರು ಹಾಗೂ ಅವರ ಶಿಷ್ಯರಾದ ಕರ್ನಾಟಕದ ಕಬೀರ ಸಂತ ಶಿಶುನಾಳ ಶರೀಫರು.

ಇವರಿಬ್ಬರೂ ಹಿಂದೂ ಹಾಗೂ ಇಸ್ಲಾಂ ಧರ್ಮಗಳ ಸಮಾನತೆ, ಸಮನ್ವಯ ಹಾಗೂ ಸಮತೆಯನ್ನು ಸಮಭಾವ, ಸಮಚಿತ್ತ ಹಾಗೂ ಸಮದೃಷ್ಟಿಯಿಂದ ನೋಡಿದಂತಹ ‘ಸಮಾನತೆಯ ಹರಿಕಾರರು’. ಇಬ್ಬರೂ ತತ್ವಜ್ಞಾನಿಗಳು, ವಿಚಾರವಾದಿಗಳು, ಶಾಂತಿ ಹಾಗೂ ಕ್ರಾಂತಿ ಪುರುಷರು, ಸಮಾಜ ಸುಧಾರಕರು. ಎಲ್ಲಕ್ಕಿಂತ ಹೆಚ್ಚಾಗಿ ಇವರಿಬ್ಬರೂ ಸಮಾಜದ ಮಾನವತೆಯ ಎರಡು ಕಣ್ಣುಗಳಾಗಿ ಮಹಾನ್ ಮಾನವತಾವಾದಿಗಳಾಗಿ ಸಮಾಜಕ್ಕೆ ಬೆಳಕನ್ನು ಕೊಟ್ಟವರು.